ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 1-8
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಳಗಾವಿ ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ : ಚಾರಿತ್ರಿಕ ಅನಾವರಣ

**ಡಾ. ಮಣಿಪ್ರಸಾದ್ ಎಸ್.ಎನ್**

ಅತಿಥಿ ಉಪನ್ಯಾಸಕರು, ಇತಿಹಾಸ ವಿಭಾಗ, ರಾಮನಗರ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

***Abstract:***

*ಭಾರತೀಯರ ಸ್ವಾತಂತ್ರ್ಯ ಹೋರಾಟದ ಚಾರಿತ್ರಿಕ ಘಟನೆಗಳು, ಕಾರ್ಯಕ್ರಮಗಳು, ಹೋರಾಟಗಳು, ಹೋರಾಟಗಾರರು ಮುಂತಾದವುಗಳನ್ನು ಗಮನಿಸಿದಾಗ ಒಂದೊಂದಕ್ಕೂ ಅದರದೇಯಾದ ವೈಶಿಷ್ಟ್ಯತೆಗಳಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅದರಂತೆಯೇ ಇಡೀ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಕ್ವಿಟ್ ಇಂಡಿಯಾ ಚಲೇಜಾವ್, ಭಾರತ ಬಿಟ್ಟು ತೊಲಗಿ ಎಂಬ ಅನೇಕ ನಾಮಾಂಕಿತಗಳಿಂದ ಖ್ಯಾತಿಗಳಿಸಿದ ಈ ಹೋರಾಟದ ಚಾರಿತ್ರಿಕ ಹಿನ್ನೆಲೆಯು ಅಷ್ಟೇ ವೈಶಿಷ್ಟ್ಯತೆಗಳಿಂದ ಕೂಡಿದೆ. ಈ ಲೇಖನದಲ್ಲಿ ಮೊದಲಿನಿಂದಲೂ ಇತಿಹಾಸದ ವಿದ್ಯಾರ್ಥಿಯಾಗಿ, ಕಿರಿಯ ಸಂಶೋಧಕನಾಗಿ ನಮ್ಮ ಮಾರ್ಗದರ್ಶಕರ ಸೂಕ್ತ ಸಲಹೆ ಮತ್ತು ಸೂಚನೆಗಳಂತೆ ಬೆಳಗಾವಿ ಜಿಲ್ಲೆಯಲ್ಲಿನ ಕ್ವಿಟ್ ಇಂಡಿಯಾ ಚಳುವಳಿ ಎಂಬ ಶೀರ್ಷಿಕೆಯಲ್ಲಿ ಅದರ ಚಾರಿತ್ರಿಕ ವೈಶಿಷ್ಟ್ಯತೆಯನ್ನು ಕುರಿತು ಅವಲೋಕಿಸಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ಸ್ವಾತಂತ್ರ್ಯ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ.*

**ಪೀಠಿಕೆ**

ಕ್ವಿಟ್ ಇಂಡಿಯಾ ಚಳುವಳಿಯು ಖ್ಯಾತಿಗಳಿಸಿದ್ದು/ ಹೋರಾಟದ ಸ್ವರೂಪ ಬದಲಿಸಿದ್ದು ಮಾತ್ರವಲ್ಲದೇ 1942ನೇ ಇಸವಿ ಎಂಬುದು ಅಂತರರಾಷ್ಟ್ರೀಯ ವೇದಿಕೆಯಲ್ಲಿಯೂ ಗಮನಾರ್ಹವಾದುದು. ಭಾರತೀಯರಂತೆ ಅದೆಷ್ಟೂ ರಾಷ್ಟ್ರಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಮಾಡುವ ಅಥವಾ ಇತರರೊಂದಿಗೆ ಬಣಗಳಾಗಿ ಸೇರುವ ಇನ್ನು ಹತ್ತು ಹಲವು ಒಡಂಬಡಿಕೆಗಳು/ ಒಪ್ಪಂದಗಳಲ್ಲಿ ತಲ್ಲೀನವಾಗಿದ್ದವು. ಅದಕ್ಕೆಲ್ಲ ಕಾರಣ ಜಾಗತಿಕ ಯುದ್ಧ. ಹೀಗೆ ಸಂಸ್ಥಾನಗಳು, ರಾಷ್ಟ್ರ, ಅಂತರರಾಷ್ಟ್ರೀಯ ಘಟನೆಗಳು ಇದರ ವೈಶಿಷ್ಟ್ಯತೆಯನ್ನು ಹೆಚ್ಚಿಸಿದ್ದವು ಹಾಗೆಯೇ ಪ್ರಭಾವ ಬೀರಿದ್ದವು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗಾಂಧೀ ಮತ್ತು ಬೆಳಗಾವಿ ಜಿಲ್ಲೆಯ ನಂಟು ಎಂಬ ಪ್ರಶ್ನೆ ಮೊದಲು ತುಂಬ ಕಾಡಿದ್ದು. 1924ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಅಧಿವೇಶನ, ನಿಜಕ್ಕೂ ಇಡೀ ಬೆಳಗಾವಿ ಜಿಲ್ಲೆಯು ಸ್ವಾತಂತ್ರ್ಯ ಹೋರಾಟದ ಪಾಲ್ಗೊಳ್ಳುವಂತಹ ಚಿತ್ರಣವನ್ನು ಬದಲಾಯಿಸಿತು ಎಂದರೇ ತಪ್ಪಾಗಲಾರದು.

***Please cite this article as:*** ಮಣಿಪ್ರಸಾದ್ ಎಸ್.ಎನ್. (2025). ಬೆಳಗಾವಿ ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ : ಚಾರಿತ್ರಿಕ ಅನಾವರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 1–8

**ಬೆಳಗಾವಿ ಜಿಲ್ಲೆಯ ಹಿನ್ನಲೆ**

ಬೆಳಗಾವಿ ಜಿಲ್ಲೆಯು 15.87 N 74.5 E ನಲ್ಲಿದೆ. ಕರ್ನಾಟಕದ ವಾಯುವ್ಯ ಭಾಗದಲ್ಲಿ ಈ ಜಿಲ್ಲೆಯಿದ್ದು, ಪಶ್ಚಿಮಘಟ್ಟಗಳ ಸಾಲಿನಲ್ಲಿ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳೊಂದಿಗೆ ಗಡಿಗಳನ್ನು ಹೊಂದಿದೆ. ಕರ್ನಾಟಕದ ಜಿಲ್ಲೆಗಳಲ್ಲಿ ಅತಿದೊಡ್ಡ ಜಿಲ್ಲೆಯಾಗಿದ್ದು, ಹಾಗೆಯೇ ರಾಜ್ಯದ ಅತ್ಯಂತ ಹಳೆಯ ಪಟ್ಟಣವು ಸಹಾ ಆಗಿದೆ. ಈ ಜಿಲ್ಲೆಯಲ್ಲಿ 10 ತಾಲೂಕುಗಳಿದ್ದು, 1278 ಗ್ರಾಮಗಳಿವೆ. ಪ್ರಾಕೃತಿಕವಾಗಿ ಸಹ್ಯಾದ್ರಿ ಪರ್ವತ ಶ್ರೇಣಿಯ ತಪ್ಪಲಿನ ಬಳಿ ಸುಮಾರು 779 ಮೀ ಎತ್ತರದಲ್ಲಿ ಅರೇಬಿಯನ್ ಸಮುದ್ರದಿಂದ 100 ಕಿ.ಮೀ ದೂರದಲ್ಲಿ ಮಾರ್ಕಂಡೇಯ ನದಿ ಹರಿಯುತ್ತದೆ.

ಬೆಳಗಾವಿ ವಡ್ಗಾಂವ್ ಮತ್ತು ಮಾಧವಪುರ ಉಪನಗರಗಳು ಕ್ರಿ.ಪೂ 400 ಮತ್ತು ಕ್ರಿ.ಶ 300 ನಡುವೆ ಪ್ರಮುಖ ನಗರ ಕೇಂದ್ರಗಳಾಗಿದ್ದವು. ಪ್ರಸ್ತುತದ ನಗರವನ್ನು ಕ್ರಿ.ಶ 12ನೇ ಶತಮಾನದಲ್ಲಿ ರಟ್ಟ ರಾಜವಂಶವು ನಿರ್ಮಿಸಿತು ಎಂಬ ಪ್ರತೀತಿ ಇದೆ. ಹಾಗೆಯೇ ಬೆಳಗಾವಿ ಕೋಟೆಯನ್ನು 1204ರಲ್ಲಿ ಬಿಚಿರಾಜ ಎಂಬ ರಟ್ಟ ಅಧಿಕಾರಿ ನಿರ್ಮಿಸಿದ್ದ. ಬೆಳಗಾವಿಯನ್ನು ರಟ್ಟ ರಾಜವಂಶ, ದೇವಗಿರಿಯ ಯಾದವ ರಾಜರು, ಖಿಲ್ಜಿಗಳು, ದೆಹಲಿ ಸುಲ್ತಾನರು, ವಿಜಯನಗರ ಸಾಮ್ರಾಜ್ಯ, ಬಹಮನಿ ಸುಲ್ತಾನರು, ಮೊಘಲರು, ಮರಾಠ ಪೇಶ್ವೆಗಳು, ಮೈಸೂರು ರಾಜಪ್ರಭುತ್ವ, ಬ್ರಿಟಿಷರು ಆಳ್ವಿಕೆ ಮಾಡಿದ್ದರು ಮತ್ತು ಈ ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಹೊಂದಿದ್ದರು.

**ಕ್ವಿಟ್ ಇಂಡಿಯಾ ಚಳುವಳಿ**

ಕ್ರಿಪ್ಸ್ ಆಯೋಗದ ವಿಫಲತೆ ಮತ್ತು ಅಂತರರಾಷ್ಟ್ರೀಯ ರಾಜಕೀಯದಲ್ಲಿ ಇಂಗ್ಲೆಂಡಿನ ಮುಂದಿನ ಸಾಮ್ರಾಜ್ಯಶಾಹಿತ್ವದ ಉಳಿವು ಅಳಿವಿನ ಸ್ಥಿತಿಯಲ್ಲಿದ್ದಾಗ ಅದನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡು ಭಾರತೀಯರು ಸ್ವಾತಂತ್ರ್ಯ ಗಳಿಸಿಕೊಳ್ಳಲು ಈ ಹೋರಾಟವನ್ನು ರೂಪಿಸಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಆಗಸ್ಟ್ 08, 1942ರಂದು ಮುಂಬೈನ ಗೋವಳಿ ಮೈದಾನದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಅಧೀವೇಶನದಲ್ಲಿ ವಸಾಹತು ಪ್ರಭುತ್ವದ ವಿರುದ್ಧ ಈ ಚಳುವಳಿಯನ್ನು ಪ್ರಾರಂಭಿಸುವ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಲಾಯಿತು. ಈ ಹೋರಾಟವನ್ನು ಅಹಿಂಸಾತ್ಮಕವಾಗಿ ಪ್ರತಿಭಟನೆಯಿಂದ ಸ್ವಾತಂತ್ರ್ಯ ಪಡೆಯುವುದು ಅಥವಾ ಆತ್ಮಾರ್ಪಣೆ ಮಾಡಿಕೊಳ್ಳುವುದು ಎಂಬ ದೃಢ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಹೋರಾಟಕ್ಕೆ ಮಾಡು ಇಲ್ಲವೇ ಮಡಿ ಎಂಬ ಘೋಷ ವಾಕ್ಯವನ್ನು ನೀಡಿದ ಗಾಂಧೀಜಿಯವರು ದೇಶದ ಸರ್ವರೂ ಈ ಚಳುವಳಿಯಲ್ಲಿ ಪಾಲ್ಗೊಂಡು ರಾಷ್ಟ್ರವನ್ನು ಬಂಧಮುಕ್ತಗೊಳಿಸಬೇಕೆಂದು ಕರೆ ನೀಡಿದರು[1].

**ಉದ್ದೇಶಗಳು**

- ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬೆಳಗಾವಿಯ ಪಾತ್ರ
- ಬೆಳಗಾವಿ ಜಿಲ್ಲೆಯಲ್ಲಿ ನಡೆದ ಹೋರಾಟದ ಆಯ್ದ ಪ್ರಮುಖ ಘಟನೆಗಳು
- ಈ ಚಳುವಳಿಯಲ್ಲಿನ ವೈಶಿಷ್ಟ್ಯತೆಗಳಿಗೂ ಬೆಳಗಾವಿಯಲ್ಲಿ ರೂಪುಗೊಳ್ಳುತ್ತಿದ್ದ ಹೋರಾಟಗಳ ಸ್ವರೂಪಗಳಿಗೂ ಇದ್ದ ಹೋಲಿಕೆಗಳ ಸ್ಪಷ್ಟೀಕರಣಗೊಳಿಸಿಕೊಳ್ಳುವುದು.
- 100 ವರ್ಷಗಳನ್ನು ಪೂರೈಸಿರುವ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸ್ಮರಣೆಯಲ್ಲಿ

[1] ಹಾಲಪ್ಪ, ಜಿ.ಎಸ್. (1964). *ಹಿಸ್ಟರಿ ಆಫ್ ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ, ವಾಲ್ಯೂಮ್–2.* ಗವರ್ನಮೆಂಟ್ ಆಫ್ ಮೈಸೂರು ಪಬ್ಲಿಕೇಷನ್. ಪುಟ. 272–277

ಸಂಕ್ಷಿಪ್ತವಾಗಿ ಈ ಹೋರಾಟವನ್ನು ಮತ್ತಷ್ಟು ಪ್ರಸುತಪಡಿಸುವುದು.

**ಕ್ವಿಟ್ ಇಂಡಿಯಾ ಚಳುವಳಿ ಮತ್ತು ಬೆಳಗಾವಿ ಜಿಲ್ಲೆ**

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಈ ಹಿಂದೆ ನಡೆದ ಪ್ರತಿಯೊಂದು ಆಂಧೋಲನದಲ್ಲಿಯೂ ಕರ್ನಾಟಕದಲ್ಲಿ ಈ ಜಿಲ್ಲೆಯ ಹೋರಾಟಗಾರರು ಪ್ರಥಮ ಸ್ಥಾನದಲ್ಲಿ ಇದ್ದರು ಹಾಗೆಯೇ ಈ ಚಳುವಳಿಯಲ್ಲಿಯೂ ಇದು ತನ್ನದೆಯಾದ ವೈಶಿಷ್ಟ್ಯತೆಗಳನ್ನು ಹೊಂದಿದೆ. ಅದಕ್ಕೆ ಉದಾಹರಣೆ ಎಂಬಂತೆ ಸವದತ್ತಿ ತಾಲೂಕು ಒಂದರಲ್ಲಿಯೇ ಪ್ರತಿಯೊಂದು ಗ್ರಾಮಕ್ಕೆ ಒಬ್ಬರಂತೆ ಒಂದೇ ದಿನದಲ್ಲಿ 101 ಸತ್ಯಾಗ್ರಹಿಗಳು ಯುದ್ಧ ವಿರೋಧಿ ಘೋಷಣೆ ಮಾಡಿ ಬಂಧಿತರಾದರು. ಇದು ಇಡೀ ಭಾರತದಲ್ಲಿಯೇ ಎಲ್ಲಿಯೂ ಇಷ್ಟು ಸುಸಂಘಟಿತವಾಗಿ ಇಂತಹ ಸತ್ಯಾಗ್ರಹ ನಡೆದಿಲ್ಲ ಎಂಬುದು ಉಲ್ಲೇಖಾರ್ಹವಾಗಿದೆ. ಇದಕ್ಕೆ ಅತಿಮುಖ್ಯ ಕಾರಣವೆಂದರೇ ಜಿಲ್ಲೆಯಲ್ಲಿನ ಕಾಂಗ್ರೆಸ್ ಕಮಿಟಿ.

ಬೆಳಗಾವಿಯಲ್ಲಿನ ಸ್ವಾತಂತ್ರ್ಯ ಹೋರಾಟಗಳಿಗೆ ಆಮೆ ಬಲದಂತಿದ್ದ ದ್ದು ಅಲ್ಲಿನ ಜಿಲ್ಲಾ ಕಾಂಗ್ರೆಸ್ ಕಮಿಟಿ, 1942ರ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ವೆಂಕಟರೆಡ್ಡಿ ಹೂಲಿಯವರು ಅಧ್ಯಕ್ಷರಾಗಿದ್ದರು ಹಾಗೆಯೇ ದತ್ತೊಪಂತ ಅಧ್ಯಾಪಕರು ಕಾರ್ಯದರ್ಶಿಗಳಾಗಿ ವಾಮನರಾವ ದೇಸಾಯಿ ಬಿದರಿಯವರು ಸಂಘಟಕರಾಗಿದ್ದರು. ಅನೇಕರು ಕಾರ್ಯಕಾರಿ ಸದಸ್ಯರಿದ್ದರು. ಇವೆರೆಲ್ಲರ ಪರಸ್ಪರ ಬೆಂಬಲ ಸಹಾಯ ಮತ್ತು ರಾಷ್ಟ್ರ ನಿರ್ಮಾಣದ ಕನಸು ಇಡೀ ಕರ್ನಾಟಕದ ಇತರೆ ಯಾವುದೇ ಜಿಲ್ಲೆಗಳಿಗಿಂತಲೂ ಕಾಂಗ್ರೆಸ್ಸನ್ನು ಕ್ರಿಯಾಶೀಲವಾಗಿಸಿದ್ದವು ಎಂದರೆ ತಪ್ಪಾಗಲಾರದು.

ಆಗಸ್ಟ್ 05 ರಂದು ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಒಂದು ಸಕಲ ಸದಸ್ಯರ ಸಭೆಯನ್ನು ಕರೆಯಿತು. ಈ ಸಭೆಗೆ ಕಾಂಗ್ರೆಸ್ ಸಮಾಜವಾದಿ ಪಕ್ಷದ ಹಾಗೂ ಕ್ರಾಂತಿಕಾರಕ ವಿಚಾರದ ಕಾರ್ಯಕರ್ತರುಗಳನ್ನು ಆಮಂತ್ರಿಸಲಾಗಿತ್ತು. ಈ ಸಭೆಯು ನಗರದ ರಾಮದೇವ ಬೀದಿಯಲ್ಲಿನ ಲೋಕೂರರವರ ಮನೆಯ ಅಟ್ಟದ ಮೇಲೆ ನಡೆಯಿತು.[2] ಗಂಗಾಧರರಾವ ದೇಶಪಾಂಡೆಯವರಿಂದ ಭಾಷಣ ಆರಂಭಿಸಿ ಈ ಸಭೆಯನ್ನು ಉದ್ಘಾಟಿಸಲಾಯಿತು. ಹೋರಾಟ ಕುರಿತು ಚರ್ಚೆಗಳಾದವು, ಅಣ್ಣೂ ಗುರೂಜಿಯವರು ಸಮಾರೋಪ ಭಾಷಣ ಮಾಡುತ್ತ 8ನೇ ದಿನಾಂಕದಂದು ಬ್ರಿಟಿಷರು ಅಧಿವೇಶನ ನಡೆಸಿಕೊಡುವುದಿಲ್ಲ ಹಾಗೂ ಎಲ್ಲರನ್ನು ಬಂಧಿಸಬಹುದು ಹಾಗಾಗಿ ಹೋರಾಟಗಾರರು ಯಾರು ಅಂದು ಮನೆಗಳಲ್ಲಿ ಮಲಗಬಾರದು ಜೊತೆಗೆ ಬ್ರಿಟಿಷರಿಗೆ ಯಾರೂ ಬಂಧಿಸಲು ಸಿಗಬಾರದೆಂದು ಚಳುವಳಿಯಲ್ಲಿ ಬಹುಪಾಲು ಯಶಸ್ವಿಯಾಗಿ ನಡೆಸಬೇಕೆಂದು ಸಲಹೆ ನೀಡಿ ಸಭೆಯನ್ನು ಮುಗಿಸಿದರು.

ಈ ಸಭೆಯ ಸಲಹೆಯಂತೆ ಎಲ್ಲರೂ ಭೂಗತರಾದರು. ಅಂದುಕೊಂಡಂತೆ ಸಾರ್ವತ್ರಿಕ ಬಂಧನವನ್ನು ಬ್ರಿಟಿಷರು ಮಾಡಿದರು. ಮೊದಲ 8–10 ದಿನಗಳವರೆಗೂ ಬೆಳಗಾವಿ ಜಿಲ್ಲೆಯಲ್ಲಿ ಹರತಾಳ, ಪ್ರಭಾತಪೇರಿ, ಧ್ವಜವಂದನೆ ಮೆರವಣಿಗೆಗಳು ಸೇರಿದಂತೆ ಅನೇಕ ಹೋರಾಟದ ಕಾರ್ಯಕ್ರಮಗಳು ನಡೆದವು. ಇದಕ್ಕೆ ಪ್ರತಿಯಾಗಿ ಪೊಲೀಸರು ಲಾಠಿ ಪ್ರಹಾರ, ಗೋಲಿಬಾರ್ ಮುಂತಾದವುಗಳನ್ನು ಪ್ರಯೋಗಿಸಿ ಚಳುವಳಿಯನ್ನು ನಿಯಂತ್ರಣಕ್ಕೆ ತರಲು ಪ್ರಯತ್ನಿಸಿ ಸ್ವಲ್ಪ ಯಶಸ್ವಿಯಾದರು. ಈ ಹೋರಾಟವು ಎಲ್ಲ ನಾಯಕರುಗಳ ಬಂಧನದಿಂದಾಗಿ ಮಾರ್ಗದರ್ಶನವಿಲ್ಲದ ಚಳುವಳಿಯಾಯಿತು. ಆದರೂ ಇದರ ಸ್ಥಿತಿ ಕರ್ನಾಟಕದಲ್ಲಿ ಸ್ವಲ್ಪ ಬದಲಾಗಿತ್ತು. ಇಲ್ಲಿ ರಂಗರಾವ್ ದಿವಾಕರ, ದ.ಪ.ಕರಮಕರ, ರಾಮರಾವ ಹುಕ್ಕೇರಿಕರ ಹಾಗೂ ಚನ್ನಬಸಪ್ಪ ಅಂಬಲಿ ಅವರು ಈ ಹೋರಾಟಕ್ಕೆ

[2] ಕುಲಕರ್ಣಿ, ಆರ್. ಎಚ್. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ವೆಂಕಟೇಶ್ವರ ಪ್ರಕಾಶನ.

ಮಾರ್ಗದರ್ಶನ ಮಾಡುತ್ತಿದ್ದರು. ಬೆಳಗಾಗಿ ಜಿಲ್ಲೆಯ ವತಿಯಿಂದ ಶ್ರೀರಂಗ ಕಾಮಂತರೂ ಮುಂಬಾಯಿ ಕೇಂದ್ರ ಸಂಘಟನೆಯೊಂದಿಗೆ ವ್ಯವಹರಿಸುತ್ತಿದ್ದರು.

ಈ ಹೋರಾಟದಲ್ಲಿ ಭೂಗತವಾಗಿ ಕಾರ್ಯಕ್ರಮಗಳನ್ನು ಚಳುವಳಿಯನ್ನು ಮುನ್ನಡೆಸುವ ಕೆಲಸವನ್ನು ಸಾಕಷ್ಟು ನಾಯಕರು ನಿಭಾಯಿಸುತ್ತಿದ್ದರು. ಅಂತಹವರುಗಳಲ್ಲಿ ವಾಮನರಾವ ಬಿದರಿಯವರು ಒಬ್ಬರು. ಇವರು ಬೆಳಗಾವಿ ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಸುವ ಒಂದು ಗುಪ್ತ ಸಂಘಟನೆಯಲ್ಲಿ ಪ್ರಮುಖರಾಗಿದ್ದರು. ಈ ಗುಪ್ತ ಸಂಘಟನೆಯ ಕೇಂದ್ರ ಕಛೇರಿ ಬೆಳಗಾವಿಯಲ್ಲಿದ್ದು, ಅದರ ಕಾರ್ಯನಿರ್ವಹಣೆಯನ್ನು ಜಯದೇವ ಕುಲಕರ್ಣಿಯವರು ನೋಡಿಕೊಳ್ಳುತ್ತಿದ್ದರು. ಜಿಲ್ಲೆಯಲ್ಲಿಯೇ ಬೇರೆ ಬೇರೆ ಹೋರಾಟದ ಕೇಂದ್ರಗಳಲ್ಲಿ 20 ರಿಂದ 30 ಜನ ಹೋರಾಟಗಾರರು ಗುಂಪು ಕಟ್ಟಿಕೊಂಡು ಹೋರಾಟದ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿದ್ದರು. ಆಗಸ್ಟ್ 1942 ರಿಂದ ಮಾರ್ಚ್ 1942ರವರೆಗೂ 8 ತಿಂಗಳುಗಳ ಕಾಲ ಚಳುವಳಿಯು ಸಂಘಟಿತವಾಗಿ ಸಕ್ರಿಯವಾಗಿತ್ತು. ಎಲ್ಲ ಚಳುವಳಗಳಂತೆ ಈ ಹೋರಾಟ ದೀರ್ಘಾವಧಿಯಿಂದ ಕೂಡಿದ್ದರೇ ಜನರು ವಿದ್ಯಾರ್ಥಿಗಳು, ರೈತರು, ಕಾರ್ಮಿಕರು ಪಾಲ್ಗೊಳ್ಳುವಿಕೆ ಕ್ರಮೇಣ ಕಡಿಮೆಯಾಗುತ್ತದೆ. ಆದರೂ ನಿಷ್ಠಾವಂತ ಕಾರ್ಯಕರ್ತರು ತಮ್ಮ ಈ ಹೋರಾಟವನ್ನು ಮುಂದುವರೆಸಿದರು. ಹಾಗೆಯೇ ಸರ್ಕಾರದ ಕೆಲಸ ಕಾರ್ಯಗಳನ್ನು ತಡೆಯುವ ಮಾರ್ಗಗಳ ಕಡೆ ಗಮನಹರಿಸಿ ಆಡಳಿತ ಯಂತ್ರಕ್ಕೆ ಪರಿಣಾಮಕಾರಿ ತಡೆ ಉಂಟುಮಾಡಲು ತಾರುತಂತಿ ಟೆಲಿಫೋನ್ ತಂತಿ ಕತ್ತಿರಿಸುವುದು, ಕಂಬ ಕಿತ್ತಿ ಬಗೆಯುವುದು, ರೈಲ್ವೆಹಳಿ ಕೀಳುವುದು/ ನಾಶಪಡಿಸುವುದು, ರೈಲ್ವೆ ಸ್ಟೇಷನ್/ಗೇಟ್ ಧ್ವಂಸ, ರೆಸ್ಟಹೌಸ್ ಸರ್ಕಾರಿ ಬಂಗ್ಲೆ ಸುಡುವುದು, ಕಚೇರಿಗಳಲ್ಲಿ ಕಾಗದ ದಾಖಲೆ ಪತ್ರಗಳನ್ನು ಸುಡುವುದು, ಸೆಂದಿಸೆರೆ ಅಂಗಡಿ ಧ್ವಂಸ, ಪೊಲೀಸರ ಡ್ರಸ್ಸು, ಬಂದೂಕು ಕದಿಯುವುದು, ಸರ್ಕಾರಿ ತೆರಿಗೆ ಹಣ ಲೂಟಿ ಮಾಡುವುದು, ಬುಲೆಟಿನ್ ಕರಪತ್ರ ತೆಗೆದು ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರಚಾರ ಮಾಡುವುದು. ಈ ಕಾರ್ಯಕ್ರಮಗಳನ್ನು ಕೈಗೊಳ್ಳಬೆಕೆಂದು ಸರ್ವಾನುಮತದಿಂದ ನಿರ್ಣಯ ಕೈಗೊಂಡರು. ಕ್ವಿಟ್ ಇಂಡಿಯಾ ಚಳುವಳಿಯನ್ನು ಸಕ್ರಿಯವಾಗಿ ಮುನ್ನಡೆಸಲು ಈ ಮೇಲಿನ ನಿರ್ಣಯಗಳಂತೆ ಭೂಗತರಾಗಿದ್ದ ಕಾರ್ಯಕರ್ತರು ಜನಸಾಮಾನ್ಯರು ಸೇರಿ ಈ ಕಾರ್ಯಕ್ರಮಗಳನ್ನು ಜಾರಿಗೆ ತಂದರು.

**ತಂತಿ ಕತ್ತಿರಿಸುವುದು**

ಹತ್ತು ಇಪ್ಪತ್ತು ಜನರ ಗುಂಪುಗಳು ತಾರುತಂತಿ ಟೆಲಿಪೋನ್ ತಂತಿ ಕತ್ತರಿಸಲು ಹೋಗುತ್ತಿದ್ದರು. ರೈಲ್ವೆ ಹಳಿ ಕಿತ್ತೆಸೆಯುವುದು, ಧ್ವಂಸಮಾಡುವುದು ಸತತವಾಗಿ ನಡೆಯುತ್ತಿತ್ತು. ಅದಕ್ಕೆ ಬ್ರಿಟಿಷ್ ಸರ್ಕಾರವು ಸಹ ಪ್ರತಿಬಂಧಕಾಜ್ಞೆಗಳನ್ನು ಜಾರಿಗೆ ತಂದಿತ್ತು. ರೈಲ್ವೆ ಹಳಿಗಳಲ್ಲಿ ಪೋಲೀಸರು, ಮಿಲಿಟರಿಯವರನ್ನು ಕಾವಲಿಗೆ ನಿಯೋಜಿಸಿದಾಗ ಹೋರಾಟಗಾರರು ತಮ್ಮ ಕೆಲಸ ಮಾಡಲು ಕಠಿಣವಾಯಿತು. ಹಾಗೆಯೇ ಕೆಲವು ಕಡೆ ಅಪಾಯಕಾರಿ ವಲಯಗಳನ್ನಾಗಿ ಘೋಷಣೆ ಮಾಡಿ ಬಿಗಿಯಾದ ಬಂದೋಬಸ್ತ್ ಮಾಡಿದರು. ಬೆಳಗಾವಿಯಿಂದ ಗೋಕಾಕ ಸ್ಟೇಷನ್‌ವರೆಗೂ ಈ ಡೆಂಜರ್‌ಝೋನ್ ವ್ಯಾಪ್ತಿಯಿತ್ತು. ಆದರೂ ಸ್ವತಂತ್ರ್ಯ ಸೇನಾನಿಗಳು ತಂತಿ ಕತ್ತಿರಿಸುವುದನ್ನು ಮುಂದುವರೆಸಿದ್ದರು. ಇದರಿಂದಾಗಿ ಸರ್ಕಾರ ದಿಕ್ಕೆಟ್ಟು ಗಾಬರಿಗೊಂಡಿತ್ತು. ಇದೆಲ್ಲದ್ದಕ್ಕೂ ಕಾರಣ ಕಾರ್ಯಕರ್ತರ ಸಂಘಟನೆ, ಹೋರಾಟಗಾರರ ಸಾಹಸಗಳು ಕಾರಣವಾಗಿದ್ದವು.

**ಕೊಲ್ಹಾಪುರದ ಸಭೆ**

1942ರ ಸೆಪ್ಟೆಂಬರ್‌ನಲ್ಲಿ ಕಾರ್ಯಕರ್ತರ ದೊಡ್ಡಗುಪ್ತ ಸಭೆಯೊಂದು ಕೊಲ್ಲಾಪುರದಲ್ಲಿ ನಡೆಯಿತು. ಈ ಸಭೆಗೆ ಊಟ, ವಸತಿ ವ್ಯವಸ್ಥೆಯನ್ನು ಕಾರ್ಯಕರ್ತರೊಂದಿಗೆ ಸೇರಿ ಶ್ರೀರಂಗ ಕಾಮತರು

ಮಾಡಿದ್ದರು. ಈ ಸಭೆಗೆ ಬೆಳಗಾವಿ, ಧಾರವಾಡ, ವಿಜಾಪುರ, ಕೊಲ್ಹಾಪುರ ಜಿಲ್ಲೆಯ ಭೂಗತ ಹೋರಾಟಗಾರರು, ನಾಯಕರುಗಳು ಬಂದಿದ್ದರು. ವಾಮನರಾವ ಬಿದಿರಿ ಶ್ರೀರಂಗ ಕಾಮತ, ಅಣ್ಣೂ ಗುರೂಜಿ, ಚಿನ್ನಪ್ಪವಾಲಿ ಜಗದೇವಪ್ಪ ಜಯದೇವ ಕುಲಕರ್ಣಿ ಮೊದಲಾದವರು ಭಾಗವಹಿಸಿದ್ದರು. ಇಲ್ಲಿ ಹೋರಾಟಕ್ಕೆ ಮುಂದಿನ ಕಾರ್ಯಕ್ರಮಗಳಾಗಿ ತಂತಿ ಕತ್ತಿರಿಸುವುದು, ರೈಲ್ವೆಹಳಿ ಕತ್ತರಿಸುವುದೆಂಬ ನಿರ್ಧಾರವನ್ನು ಕೈಗೊಳ್ಳಲಾಯಿತು. ಅದರಂತೆ ಕೆಲಸ ಮಾಡಲು ಅಣಿಯಾದರು. ಆದರೆ ಈ ಗೌಪ್ಯ ವಿಷಯವು ಸರ್ಕಾರದ ಅಧಿಕಾರಿಗಳಿಗೆ ತಿಳಿದುಹೋಯಿತು. ಸರ್ಕಾರವು ಈ ಧ್ವಂಸ ಕಾರ್ಯವನ್ನು ತಪ್ಪಿಸಲು ಪ್ರಯತ್ನಗಳನ್ನು ಮಾಡಿಕೊಂಡಿತ್ತು. ಆದರೆ ಏಕಕಾಲಕ್ಕೆ ಸುಮಾರು 100 ಕಡೆ ತಂತಿ ಕತ್ತಿರಿಸುವ ಕಾರ್ಯವು ಈ ಸಂಘಟನೆ ಮಾಡಿದ್ದರಿಂದ ನಿಜವಾಗಿಯೂ ಸರ್ಕಾರವು ಹೆದರುವಂತೆ ಮಾಡಿತು.

**ಸುಲಧಾಳ ಸ್ಟೇಷನ್ ಧ್ವಂಸ**

ಅಕ್ಕತಂಗೇರಹಾಳ ಪಾಚ್ಚಾಪುರ ಗುಂಪಿನವರು ಸುಲಧಾಳ ರೈಲ್ವೆ ಸ್ಟೇಷನ್ ಸುಟ್ಟುಹಾಕಲು ನಿಶ್ಚಿಯಿಸಿದರು. ಅದಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಹುದ್ಲಿ, ಅಕ್ಕತಂಗೇರಹಾಳ ಮತ್ತು ಪಾಚ್ಚಾಪುರಗಳನ್ನು ಕುಂದರನಾಡು ಎಂದು ಕರೆಯುತ್ತಾರೆ.

ಈ ಭಾಗದ 44 ಹಳ್ಳಿಗಳು ಬೆಳಗಾವಿ ತಾಲ್ಲೂಕು ಗೋಕಾಕ ತಾಲ್ಲೂಕು ಮತ್ತು ಹುಕ್ಕೇರಿ ತಾಲೂಕುಗಳ್ನು ಒಳಗೊಂಡಿದೆ. ಈ ಕುಂದರನಾಡು ಮೊದಲಿನಿಂದಲೂ ರಾಜಕೀಯ ಚಳುವಳಿಗಳಲ್ಲಿ ಮುಂಚೂಣೆಯಲ್ಲಿತ್ತು. ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ನೆಲೆ ಮಾಡಿದ ಕೀರ್ತಿ ಕರ್ನಾಟಕದ ಸಿಂಹ ಎನಿಸಿಕೊಂಡ ಗಂಗಾಧರರಾವ ದೇಶಪಾಂಡೆಯವರಿಗೆ ಸಲ್ಲುತ್ತದೆ. ಇವರು ಲೋಕಮಾನ್ಯ ತಿಲಕ್‌ರವರ ಶಿಷ್ಯರಾಗಿದ್ದರು. ಹಾಗೆಯ ಮುಂದೆ ಗಾಂಧೀಜಿಯವರ ಪರಮಾಪ್ತರಾಗಿ ಗುರ್ತಿಸಿಕೊಂಡಿದ್ದರು. ಇವರು ಮೂಲತಃ ಹುದಲಿಯವರಾಗಿದ್ದು, ಹುದಲಿಯ ಸಮೀಪ ಕುಮರೆ ಎಂಬ ತೋಟದಲ್ಲಿ ಸ್ವರಾಜ್ಯ ಆಶ್ರಮವನ್ನು ಸ್ಥಾಪಿಸಿ ಖಾದಿ ಕಾರ್ಯ ನಡೆಸುತ್ತಿದ್ದರು. ಹಾಗೆಯೇ ಡಾ. ರಾಮಚಂದ್ರ ನಾರಾಯಣ ಜೋಶಿ ಮತ್ತು ರಾವಜಿಕಾಕಾ ಇವರಿಬ್ಬರೂ ಪಾಚ್ಚಾಪುರದವರು, ಈ ಹಿನ್ನಲೆಯುಳ್ಳ ಗ್ರಾಮಗಳಲ್ಲಿ ಗಾಂಧಿ ಚಳುವಳಿ ಆರಂಭಕ್ಕೆ ರಾಷ್ಟ್ರೀಯ ಶಾಲೆ ಶುರುಮಾಡಿದ್ದರು. 1920–21ರ ಅಸಹಕಾರ ಚಳುವಳಿ, 1932–33ರ ಕಾಯಿದೆ ಭಂಗ ಚಳುವಳಿ, 1941ರ ವೈಯಕ್ತಿಕ ಸತ್ಯಾಗ್ರಹ ಮುಂತಾದವುಗಳಲ್ಲಿ ಈ ಕುಂದರನಾಡಿನಿಂದ ಸುಮಾರು ನೂರಾರು ದೇಶಭಕ್ತರು ಜೈಲಿಗೆ ಹೋಗಿದ್ದರು. ಹಾಗೂ 1936ರಲ್ಲಿ ಅಖಿಲ ಭಾರತ ಗಾಂಧಿ ಸೇವಾ ಸಂಘದ ಅಧಿವೇಶನವನ್ನು ಹುದಲಿಯಲ್ಲಿ ನಡೆಸಲಾಯಿತು. ಈ ರೀತಿಯ ಹೋರಾಟದ ಹಿನ್ನಲೆಯನ್ನು ಹೊಂದಿದ್ದ ಕುಂದರನಾಡಿನಲ್ಲಿ ಭೂಗತ ಕಾರ್ಯಕರ್ತರು ಎರಡು ಗುಂಪುಗಳಾಗಿ ತಮ್ಮ ಚಟುವಟಿಕೆಗಳನ್ನು ಮುಂದುವರೆಸುತ್ತಿದ್ದರು. ಈ ಹೋರಾಟದ ಮನೋಭಾವ ಎಷ್ಟು ವ್ಯಾಪಕವಾಗಿ ಈ ಪ್ರದೇಶದಲ್ಲಿ ನೆಲೆಗೊಂಡಿತ್ತೋ ಅಷ್ಟೇ ವ್ಯಾಪಕವಾಗಿ ಈ ಪ್ರದೇಶದ ಮೇಲೆ ಸರ್ಕಾರವು ಪೊಲೀಸ್ ಪಡೆಯನ್ನು ಸಜ್ಜುಗೊಳಿಸಿದ್ದರು. ಗುಜನಾಳದಲ್ಲಿ ಒಂದು ಪೊಲೀಸ್ ಠಾಣೆಯನ್ನು ತೆಗೆದು ಒಬ್ಬ ಯುರೋಪಿಯನ್ ಪೊಲೀಸ್‌ನ್ನು ಡಿವೈಎಸ್‌ಪಿಯಾಗಿ ನೇಮಿಸಿದ್ದರು. ಆತನೇ ಕ್ರೌನ್. ಈತನೊಬ್ಬ ಕ್ರೂರಿ ದುಷ್ಟ ಅಧಿಕಾರಿಯಾಗಿದ್ದ ಹಾಗೆಯೇ ಸರ್ಕಾರಕ್ಕೆ ಒಬ್ಬ ನಿಷ್ಠಾವಂತ ದಕ್ಷ ಅಧಿಕಾರಿಯಾಗಿ ತನ್ನ ಸೇವೆಯನ್ನು ಸಲ್ಲಿಸುತ್ತಿದ್ದ[3].

ಸುಲಧಾಳ ರೈಲ್ವೆ ಸ್ಟೇಷನ್ ಮತ್ತು ಗುಜನಾಳದ ಪೊಲೀಸ್ ಠಾಣೆಗೂ ತುಂಬಾ ದೂರವಿರಲಿಲ್ಲ

[3] ದೇಶಪಾಂಡೆ, ಬಾ.ಯಾ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.

ಹಾಗಾಗಿ ಹೋರಾಟಗಾರರು ಬಹಳಷ್ಟು ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಸುಲಧಾಳ ಸ್ಟೇಷನ್ ಧ್ವಂಸ ಮಾಡುವ ಕಾರ್ಯವನ್ನು ಮಾಡಿದರು. ಈ ಸ್ಟೇಷನ್ ಸುಡುವ ಕೆಲಸವನ್ನು ಹುದಲಿ ಗುಂಪಿಗೆ ವಹಿಸಲಾಗಿತ್ತು. ಅಂದು ಶುಕ್ರವಾರ ಅಂಕಲಗಿಯ ಸಂತೆ ನಡೆಯುತ್ತಿತ್ತು. ನೂರಾರು ಜನರು ನೆರದಿದ್ದರು. ಅವರ ಮುಂಭಾಗದಲ್ಲಿ ಈ ಕಾರ್ಯವನ್ನು ಆರಂಭಿಸಿದರು. ಯುದ್ಧ ಮಾಸ್ತರರು ಸ್ಟೇಷನ್ ಮಾಸ್ತರರನ್ನು ಹೊರಗೆ ತಂದು ನಿಲ್ಲಿಸಿದರು. ರಾಜಾರಾಮ ದೇಶಪಾಂಡೆ, ವಾಮನ ಜೋಶಿ ಮತ್ತು ಮಹಾದೇವ ಪತ್ತಾರ ಗನ್ನುಗಳಿಂದ ಟೆಲಿಫೋನ್ ಯಂತ್ರಗಳನ್ನು ಒಡೆದು ಚೂರು ಮಾಡಿದರು. ಅಂದೇ ಬಂದಿದ್ದ 50 ಡಬ್ಬಿ ಚಿಮಣಿ ಎಣ್ಣೆಯ ಡಬ್ಬಿಗಳನ್ನು ಒಡೆದು ಅಲ್ಲಿಯೇ ಚೆಲ್ಲಲಾಯಿತು. ಕೆಲವೇ ಕ್ಷಣಗಳಲ್ಲಿ ಬೆಂಕಿಯನ್ನು ಹೊತ್ತಿಸಿ ಇಡೀ ಸ್ಟೇಷನ್‌ನ್ನು ಸುಡಲಾಯಿತು. ಇದು ಕುಂದರನಾಡಿನ ಸ್ವಾತಂತ್ರ್ಯ ಯೋಧರ ಸಾಹಸ ಎಂದು ಆಗಾಗಲೇ ಜೈಲು ಸೇರಿದ್ದ ಕೆಲ ಮುಖಂಡರು ವಿಷಯ ತಿಳಿದು ಸಂತಸ ಪಟ್ಟರು.

**ಗೋಕಾಕ ತಾಲೂಕು ಕಚೇರಿಯ ಮೇಲೆ ಮಹಿಳೆಯರ ದಾಳಿ**

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಾಮಾನ್ಯವಾಗಿ ನಾಡಿನ ಜನತೆ ಭಾಗವಹಿಸಿರುವುದನ್ನು ಕಾಣುವ ಹಾಗೆ ಮಹಿಳೆಯರು ಈ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಚಲೇಜಾವ್ ಚಳುವಳಿಯು ತೀವ್ರವಾಗಿ ನಡೆಯುತ್ತಿದ್ದ ಸಂದರ್ಭದಲ್ಲಿ ಗೋಕಾಕ ತಾಲೂಕು ಕಚೇರಿ, ಫೌಜುದಾರ ಕಚೇರಿ, ಸಬ್‌ರಿಜಿಸ್ಟರ್ ಕಚೇರಿ ಎಲ್ಲವೂ ಒಂದೇ ಕಟ್ಟಡದಲ್ಲಿದ್ದವು. ಹಾಗಾಗಿ ಅಲ್ಲಿನ ಕಚೇರಿಗಳಲ್ಲಿನ ಕಾಗದ ಪತ್ರಗಳನ್ನು ಹರಿದುಹಾಕುವ ಒಂದು ಕಾರ್ಯಕ್ರಮವನ್ನು ರೂಪಿಸಲಾಯಿತು. ಇದರ ವಿಶೇಷತೆ ಎಂದರೆ ಈ ಕಾರ್ಯಕ್ರಮದ ನಾಯಕತ್ವವನ್ನು ಸಂಪೂರ್ಣವಾಗಿ ಮಹಿಳೆಯರಿಗೆ ವಹಿಸಲಾಗಿತ್ತು. ಇದಕ್ಕಾಗಿ ಅಕ್ಕತಂಗೇರಹಾಳದ ಶ್ರೀಮತಿ ಗಂಗವ್ವ ಹೊಳೆಯಾಚೆ, ತಂಗೆವ್ವ ಬಡಿಗೇರೆ, ಚನಬಸವ್ವ ಭಡಕಲಿ, ಬಾಳವ್ವ ಬೇರಗಲ್ಲ, ಕಾಶವ್ವ ಹೊಸಮನಿ, ಸರಸ್ವತಿಬಾಯಿ ಬೌಗುಲೆ, ನಿಂಗವ್ವ ಚಿಕ್ಕೂಡಿ ಮೊದಲಾದವರ ತಂಡವನ್ನು ರಚಿಸಲಾಗಿತ್ತು. ಮುಂಜಾನೆ 11 ಗಂಟೆಗೆ ನಿಗಧಿಯಂತೆ ಕಚೇರಿಯನ್ನು ಪ್ರವೇಶಿಸಿ ಕಾಗದದ 21 ಪ್ರಕರಣಗಳನ್ನು ಹರಿದು ಜೈಕಾರವನ್ನು ಹಾಕಿ ಅಲ್ಲಿಂದ ಹೊರಟರು. ಪೋಲೀಸರು ಈ ಮಹಿಳಾ ತಂಡವನ್ನು ಕಂಡು ಏನು ಮಾಡದ ಸ್ಥಿತಿಯಲ್ಲಿದ್ದರು[4]. ಹೀಗೆ ಮಹಿಳಾ ಹೋರಾಟಗಾರ್ತಿಯರು ಧೈರ್ಯ ಸಾಹಸವನ್ನು ಮೆರೆದು ತಮಗೆ ನೀಡಿದ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದರು.

**ಚಳುವಳಿಯನ್ನು ಹತ್ತಿಕ್ಕಲು ಆಸ್ಟ್ರೇಲಿಯನ್ ಸೈನ್ಯ ನಿಯೋಜನೆ**

ಬೆಳಗಾವಿ ಜಿಲ್ಲೆಯಲ್ಲಿ ಈ ಚಳುವಳಿ ದಿನದಿಂದ ದಿನಕ್ಕೆ ಅತ್ಯುಗ್ರವಾದ ರೂಪವನ್ನು ತಾಳುತ್ತಿತ್ತು, ಭೂಗತ ಕಾರ್ಯಕರ್ತರಿಗೆ ಜನರ ಬೆಂಬಲವಿದ್ದದರಿಂದ ಅವರನ್ನು ಬಂಧಿಸುವುದು ಸರ್ಕಾರಕ್ಕೆ ಕಷ್ಟಸಾಧ್ಯವಾಯಿತು. ಇಡೀ ಗ್ರಾಮವನ್ನೇ ಶೋಧಿಸಿದರು, ಜಪ್ತಿ ಮಾಡಿದರು ಒಬ್ಬೇ ಒಬ್ಬ ಹೋರಾಟಗಾರನನ್ನುಬಂಧಿಸಲು ಸಾಧ್ಯವಾಗುತ್ತಿರಲಿಲ್ಲ, ಹಾಗಾಗಿ ತಮಗೆ ಆಗುತ್ತಿರುವ ಅಸಹಾಯಕತೆಯನ್ನು ಮೇಲಾಧಿಕಾರಿಗಳಿಗೆ ತಿಳಿಸಿದಾಗ ಸರ್ಕಾರವು ಪೋಲೀಸರಿಗೆ ನೆರವಾಗಲು ಮಿಲಟರಿ ಸೇನೆಯನ್ನು ರವಾನಿಸಲು ಒಪ್ಪಿಕೊಂಡರು. ಹಾಗೆಯೇ ಧಾರವಾಡ ಜಿಲ್ಲೆಯಲ್ಲಿಯೂ ಚಳುವಳಿ ತೀವ್ರವಾಗಿತ್ತು. ಹೇಗಾದರೂ ಮಾಡಿ ಚಳುವಳಿಯನ್ನು ನಿಯಂತ್ರಿಸಬೇಕಾದಾಗ ದಿನಾಂಕ 09 ಮಾರ್ಚ್ 1943ರಂದು ಮುಂಬಾಯಿಯ ಗವರ್ನರ್ ಮೇಲಾಧಿಕಾರಿಗಳು ಅಥವಾ ಉನ್ನತಾಧಿಕಾರಿಗಳ ಸಭೆಯನ್ನು ಕರೆದರು. ಎಲ್ಲರೂ ಸಾಕಷ್ಟು ಚರ್ಚೆಮಾಡಿ ಬೆಳಗಾವಿ ಜಿಲ್ಲೆಯ ಗುರ್ಲಹೊಸೂರು,

[4] ಅದೇ. ಪುಟ 172,173

ಪಾಚ್ಚಾಪುರ, ಬೈಲಹೊಂಗಲ, ಕಿತ್ತೂರು ಹಾಗೂ ಧಾರವಾಡ ಜಿಲ್ಲೆಯ ಧಾರವಾಡ, ಹಾವೇರಿ, ಆಳಣಾವರ ಹಾಗೂ ಗದಗಗಳಲ್ಲಿ ಒಂದೊಂದು ಸೈನ್ಯದ ತುಕಡಿಯನ್ನು ನಿಯೋಜಿಸಬೇಕೆಂದು ತೀರ್ಮಾನಿಸಿದರು. ಭಾರತೀಯರ ಸೈನಕರೆಲ್ಲರೂ ಯುದ್ದಭೂಮಿಗೆ ಹೋಗಿದ್ದರು, ಉಳಿದ ಸ್ವಲ್ಪ ಸೈನಿಕರು ಸರ್ಕಾರಿ ಆಸ್ತಿಪಾಸ್ತಿ ರಕ್ಷಣೆಗೆ ನಿಯೋಜಿಸಲ್ಪಟ್ಟಿದ್ದರು ಇಂತಹ ಪರಿಸ್ಥಿತಿಯಲ್ಲಿ ಆಸ್ಟ್ರೇಲಿಯನ್ ಕೆಂಪು ಸೈನಿಕರನ್ನು ಕರೆಯಿಸಿ ಈ ಮೇಲ್ಕಂಡ ಸ್ಥಳಗಳಲ್ಲಿ ಪೋಲಿಸರ ನೆರವಿಗೆ ನಿಯೋಜಿಸಲಾಯಿತು.

**ಬೆಳಗಾವಿಗೆ ಮೊದಲ ಸ್ಥಾನ**

ಮುಂಬಾಯಿ ಪ್ರಾಂತ್ಯದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಬಹಳ ಯಶಸ್ವಿಯಾಗಿ ನಡೆಸಿದಕ್ಕೆ ಬೆಳಗಾವಿ ಜಿಲ್ಲೆಗೆ ಸರ್ಕಾರವು ಪ್ರಥಮ ಬಹುಮಾನ ಕೊಟ್ಟಿತು. ಸತಾರಾ ಜಿಲ್ಲೆಗೆ ಎರಡನೇ ಸ್ಥಾನವನ್ನು ನೀಡಿದರು. ಈ ಎರಡು ಜಿಲ್ಲೆಗಳಿಗೂ ಒಂದೊಂದು ವಿಶೇಷತೆ ಇತ್ತು. ಸತಾರಾ ಜಿಲ್ಲೆಯಲ್ಲಿ ಈ ಚಳುವಳಿಯು ಅಹಿಂಸೆಯನ್ನು ಸರಿಯಾಗಿ ಅನುಸರಿಸಲಿಲ್ಲ, ಆದರೇ ಬೆಳಗಾವಿ ಜಿಲ್ಲೆಯಲ್ಲಿ ಅದನ್ನು ಕಠೋರತೆಯಿಂದ ಪಾಲಿಸಲಾಯಿತು. ಹಾಗೆಯೇ ಮುಂಬಾಯಿ ಪ್ರಾಂತ್ಯದ ಗವರ್ನರ್ ಬೆಳಗಾವಿಗೆ ಬಂದಾಗ ಸರ್ಕಾರಕ್ಕೆ ಮಣಿಯದ ಜಿಲ್ಲೆಯು ಭಾರಿ ಪುಂಡ ಜಿಲ್ಲೆ, ದೇಶದಲ್ಲೆಲ್ಲ ಚಳುವಳಿ ಅಡಗಿದಾಗ ಇಲ್ಲಿ ಅದು ಅತ್ಯುಗ್ರವಾಗಿ ನಡೆದಿದೆ ಎಂದು ಜಿಲ್ಲೆಯನ್ನು ವರ್ಣನೆಮಾಡಿ ಕಾರ್ಯಕರ್ತರಿಗೆ ಪ್ರಥಮ ಪ್ರಶಸ್ತಿಯನ್ನು ಕೊಟ್ಟಿದ್ದು ಕ್ವಿಟ್ ಇಂಡಿಯ ಚಳುವಳಿಯಲ್ಲಿ ಜಿಲ್ಲೆಗೆ ದೊರೆತ ಅವಿಸ್ಮರಣೀಯವಾದ ನೆನಪಾಗಿದೆ.

ಈ ಎಲ್ಲಾ ಕ್ರಾಂತೀಯ ಹೋರಾಟಕ್ಕೂ ಕಾರಣರಾದ ಶ್ರೀರಂಗ ಕಾಮತ (ಬೆಳಗಾವಿ), ಚನ್ನಪ್ಪ ವಾಲಿ (ಸಂಪಗಾವ), ವಡವಿ ಮಾಸ್ತರ (ಹುದ್ಲಿ), ಅಣ್ಣೂ ಗುರೂಜಿ (ಪಾಚ್ಚಾಪೂರ), ವಾಮನರಾವ ಬಿದಿರಿ(ಅಕ್ಕತಂಗೇರಹಾಳ) ಇವರನ್ನು ಹಿಡಿದುಕೊಟ್ಟವರಿಗೆ/ ಸಹಾಯ ಮಾಡಿದವರಿಗೆ 5 ಸಾವಿರ ರೂಪಾಯಿಗಳ ಬಹುಮಾನವನ್ನು ನೀಡುವುದಾಗಿ ಸರ್ಕಾರವು ಘೋಷಿಸಿತು. ಇನ್ನೂ ಇತರೆ ಕಾರ್ಯಕರ್ತರ ಸುಳಿವು ನೀಡಿದವರಿಗೆ 1 ಸಾವಿರ, 2 ಸಾವಿರ 500 ರೂಪಾಯಿಗಳ ಬಹುಮಾನ ಘೋಷಿಸಲಾಯಿತು. ಇದು ಬೆಳಗಾವಿ ಜಿಲ್ಲೆಯಲ್ಲಿ ಹೋರಾಟದ ತೀವ್ರತೆಯನ್ನು ನಾಡಿನ ಜನತೆಗೆ ಸ್ಪಷ್ಟವಾಗಿ ಒಂದು ಸಣ್ಣ ನಿರ್ದಶನದಿಂದಾಗಿ ಕಾಣುತ್ತದೆ ಎಂದು ಹೇಳಬಹುದಾಗಿದೆ[5].

ಒಟ್ಟಾರೆ ಭಾರತೀಯರ ಸ್ವಾತಂತ್ರ್ಯ ಹೋರಾಟದ ಅಂತಿಮ ಪ್ರಯತ್ನವಾದ ಚಲೇಜಾವ್ ಚಳುವಳಿಯಲ್ಲಿ ಬೆಳಗಾವಿ ಜಿಲ್ಲೆಯ ಪಾತ್ರ ಒಂದು ವಿಶೇಷವಾದ ಅಧ್ಯಾಯವಾಗಿದೆ. ನಾಡಿನ ಇತರೇ ಭಾಗಗಳಲ್ಲಿಯೂ ಸಾಕಷ್ಟು ವೈಶಿಷ್ಟ್ಯತೆಯಿಂದ ಪ್ರಖರವಾಗಿ ಮತ್ತೆ ತಮ್ಮ ಜೀವದ ಹಂಗು ತೊರೆದು ದೇಶವನ್ನು ಸ್ವಾತಂತ್ರ್ಯಗೊಳಿಸಲು ಇವರು ತೋರಿದ ಧೈರ್ಯ, ಸಾಹಸ ತ್ಯಾಗದ ಮನೋಭಾವ ನಿಜಕ್ಕೂ ಮೆಚ್ಚುವಂತಹದು. ಅಂತಿಮವಾಗಿ ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಎಲ್ಲರಿಗೂ ಇಂದು ನಾವು ಅನುಭವಿಸುತ್ತಿರುವ ಸ್ವತಂತ್ರ್ಯದ ಆಖಂಡ ರಾಷ್ಟ್ರದ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ.

**ಪರಾಮರ್ಶನ ಗ್ರಂಥಗಳು**


- ಅಶ್ವತ್ಥನಾರಾಯಣ:2021, ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕ, ಇತಿಹಾಸ ದರ್ಪಣ ಪ್ರಕಾಶನ,ಬೆಂಗಳೂರು.
- ದೇಶಪಾಂಡೆ, ಬಾ.ಯಾ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.


[5] ಸೂರ್ಯನಾಥ್‌ಕಾಮತ್ ಮತು ̩ದಾನಿ ಸುರೇಂದ್ರ. (1988). *ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು.* ಪುಟ. 1054–105

- ಕುಲಕರ್ಣಿಆರ್.ಎಚ್. (1992). ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ. ವೆಂಕಟೇಶ್ವರ ಪ್ರಕಾಶನ.
- ನಾಗರತ್ನಮ್ಮಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ.* ದೇಶಿ ಪುಸ್ತಕ ಪ್ರಕಾಶನ.
- ಸಿದ್ದವ್ವನಹಳ್ಳಿ ಕೃಷ್ಣಶರ್ಮ. (1968). *ಗಾಂಧೀ ಮತ್ತು ಕರ್ನಾಟಕ.* ಗಾಂಧೀ ಸ್ಮಾರಕ ನಿಧಿ.
- ಸೂರ್ಯನಾಥ್ಕಾಮತ್ ಮತು ತದಾನಿ ಸುರೇಂದ್ರ. (1988). ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು